MVC 529/2021 PW-1

**ದಿನಾಂಕಃ 04-12-2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲ ರಿಂದಃ**

1. ಬಿಡುಗಡೆ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ-7 ಎಂದು** ಗುರುತಿಸಲಾಯಿತು.
2. ನೋಟರೀಕೃತ ಆಧಾರ್ ಕಾರ್ಡ್ ನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ-8 ಎಂದು** ಗುರುತಿಸಲಾಯಿತು.
3. ನೋಟರಿಕೃತ ಪ್ಯಾನ್ ಕಾರ್ಡ್ ನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ-9 ಎಂದು** ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

**1.** ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಅಪಘಾತವಾದಾಗ ನನಗೆ 55 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು 41 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ಅಪಘಾತವಾದ ಸಮಯದಲ್ಲಿ ನಾನು ಧರ್ಮಪುರದಿಂದ ಶಿರಾಕ್ಕೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದೆ. ಸದರಿ ವಾಹನ ನನಗೆ ಸೇರಿದ್ದು. ಆ ದಿನ ವಾಹನವನ್ನು ನಾನೇ ಚಲಾಯಿಸಿಕೊಂಡು ಬರುತ್ತಿದ್ದೆ. ನನಗೆ ಚಾಲನಾ ಪರವಾನಗಿ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನಗೆ ಡಿ ಎಲ್ ಇರಲಿಲ್ಲ ಎಂದರೆ ಸರಿಯಲ್ಲ.

2. ಆ ದಿನ ನಾನು ಮತ್ತು ಬಾಬು ಧರ್ಮಪುರದಿಂದ ಶಿರಾಕ್ಕೆ ಬರುತ್ತಿದ್ದೆವು. ನಾವು ಚಂಗಾವರ ರಸ್ತೆಯಲ್ಲಿ ಬರುತ್ತಿದ್ದಾಗ ಟ್ರ್ಯಾಕ್ಟರ್ ಚಂಗಾವರದಲ್ಲಿ ಡಿಕ್ಕಿ ಪಡಿಸಿರುತ್ತದೆ. ಆ ದಿನ ಟ್ರ್ಯಾಕ್ಟರ್ ಧರ್ಮಪುರ ಕಡೆಯಿಂದ ಬಂದು ಹಿಂಬದಿಯಿಂದ ಡಿಕ್ಕಿ ಪಡಿಸಿರುತ್ತದೆ. ಸದರಿ ಅಪಘಾತದಲ್ಲಿ ನನ್ನ ಮುಖಕ್ಕೆ ಮತ್ತು ಕೈ ಕಾಲಿಗೆ ಗಾಯಗಳಾಗಿರುತ್ತದೆ. ಅಪಘಾತವಾದ ನಂತರ ಶಿರಾದ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ನಲ್ಲಿ ಬಂದಿರುತ್ತೇನೆ. ಅದೇ ದಿನ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ 15 ದಿನ ದಾಖಲಾಗಿದ್ದೆನು.

3. ಆಸ್ಪತೆರಯಿಂದ ಬಿಡುಗಡೆಯೂದ ನಂತರ ತುಮಕೂರಿಗೆ ಹೋಗಿರುವುದಿಲ್ಲ , ಮಧುಗಿರಿಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಅಪಘಾತದಲ್ಲಿ ನನಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿತ್ತು ಎಂದರೆ ಸರಿಯಲ್ಲ. ನಾನು ಆ ದಿನ ಹೆಲ್ ಮೆಟ್ ಹಾಕದೇ ಇರುವ ಕಾರಣ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿಯು ನಾನು ಹೆಲ್ ಮೆಟ್ ಹಾಕಿದ್ದೆ , ಅದು ಅಪಘಾತದಲ್ಲಿ ಹಾರಿ ಹೋಗಿ ಗಾಯವಾಗಿರುತ್ತದೆ ಎಂದು ನುಡಿಯುತ್ತಾರೆ.

4. ನಾನು ಚಿಕಿತ್ಸೆಗಾಗಿ 2,00,000/-ರೂ. ಖರ್ಚು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ 20,000/- ರೂ. ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದೈಹಿಕವಾಗಿ ಯಾವುದೇ ನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ದೂರನ್ನು ಯಾರು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಟ್ಯಾಕ್ಟರ್ ನಮಗೆ ಮೊದಲು ಗುದ್ದಿ , ಆ ನಂತರ ಇನ್ನೊಂದು ಮೋಟಾರ್ ಸೈಕಲ್ ಗೆ ಗುದ್ದಿದ್ದು , ಸದರಿ ಮೋಟಾರ್ ಸೈಕಲ್ ನವರು ದೂರು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

5. ಪೋಲಿಸರು ತುಮಕೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನನ್ನು 1 ವಾರದ ನಂತರ ವಿಚಾರಣೆ ಮಾಡಿರುತ್ತಾರೆ. ಆ ದಿನ ಅಪಘಾತವು ಕೆಎ-64-ಎಲ್-2658 ಮತ್ತು ಕೆಎ-16-ಇಜೆ-9757 ಎರಡೂ ಬೈಕ್ ಗಳು ಮುಖಾ -ಮುಖಿ ಪಡಿಸಿಕೊಂಡು ಅಪಘಾತವಾಗಿರಇುತ್ತದೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಟ್ಯಾಕ್ಟರ್ ಟ್ರೈಲರ್ ಗೆ ಈ ಪ್ರಕರಣದಲ್ಲಿ ಸಿಲುಕಿಸಿರುತ್ತೇವೆ ಎಂದರೆ ಸರಿಯಲ್ಲ. ಎಫ್ ಐ ಆರ್, ಮಹಜರ್ ಮತ್ತು ಐ ಎಂ ವಿ ವರದಿಯಲ್ಲಿ ಬೇರೆ ಟ್ಯಾಕ್ಟರ್ ನಂ. ನ್ನು ತೋರಿಸಿ ದೋ.ಪಟ್ಟಿಯಲ್ಲಿ 1 ನೇ ಎದರುದಾರರ ಟ್ಯಾಕ್ಟರ್ ಟ್ರೈಲರ್ ನ್ನು ಸಿಲುಕಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರಶ್ನಿತ ವಾಹನವು ಈ ಅಪಘಾತದಲ್ಲಿ ಭಾಗಿಯಾಗದೇ ಇದ್ದರೂ ಪರಿಹಾರಕ್ಕಾಗಿ ಕೆಎ-51-ಟಿ-6263 ಮತ್ತು ಕೆಎ-51-ಟಿ-6264 ನ ವಾಹನಗಳನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೂ ಮೇಲೆ ತಿಳಿಸಿದ ಟ್ಯಾಕ್ಟರ್ ಟ್ರೈಲರೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು , ಟ್ಯಾಕ್ಟರ್ ಮಾಲೀಕರು , ಪೋಲಿಸರು ಎಲ್ಲರೂ ಸೇರಿ ಪರಿಹಾಕ್ಕಾಗಿ ಈ ಪ್ರಕರಣವನ್ನು ಸೃಷ್ಟಿಸಿ, ದಾಖಲೆಗಳನ್ನು ಸೃಷ್ಟಿಸಿಕೊಂಡು , ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.